ಬೆಳ್ಳಂದೂರು, ಅಗರ ಸೇರಿದಂತೆ ಬೆಂಗಳೂರಿನ ಕೆರೆಗಳ ಬಫರ್ ವಲಯ

# ‘ಎನ್‌ಜಿಟಿ ಆದೇಶ: ಪೂರ್ವಾನ್ವಯ ಬೇಡ’

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರಿನ ಕೆರೆಗಳ ಸುತ್ತಲಿನ 75 ಮೀಟರ್ ವ್ಯಾಪ್ತಿ ಪ್ರದೇಶವನ್ನು ‘ಬಫರ್ ವಲಯ’ ಎಂದು ಘೋಷಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶವನ್ನು ಪೂರ್ವಾನ್ವಯ ಆಗುವಂತೆ ಜಾರಿಗೊಳಿಸುವ ಅಗತ್ಯವಿಲ್ಲ ಎಂದು ಸ್ವಯಂ ಸೇವಾ ಸಂಸ್ಥೆ ಫಾರ್ವರ್ಡ್ ಫೌಂಡೇಷನ್ ಸುಪ್ರೀಂ ಕೋರ್ಟ್‌ಗೆ ತಿಳಿಸಿತು.

ಬೆಂಗಳೂರಿನ ಕೆರೆಗಳು ಮತ್ತು ರಾಜ ಕಾಲುವೆಗಳ ಬಫರ್ ವಲಯದ ಮಿತಿ ಹೆಚ್ಚಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನೀಡಿರುವ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಕೆ. ಸಿಕ್ರಿ ನೇತೃತ್ವದ ತ್ರಿಸದಸ್ಯ ಪೀಠದೆದುರು ಮಂಗಳವಾರ ಸಂಸ್ಥೆಯ ಪರ ವಕೀಲ ಸಜನ್ ಪೂವಯ್ಯ ವಾದ ಮಂಡಿಸಿದರು.

‘ಬೆಂಗಳೂರಿನ ಇತರ ಎಲ್ಲ ಕೆರೆಗಳು ಮತ್ತು ಕಾಲುವೆಗಳ ಸ್ಥಿತಿಗತಿ ಅರಿತು ಅವುಗಳ ಸುತ್ತಲಿನ ಬಫರ್ ವಲಯದ ಮಿತಿಯನ್ನು ಸಡಿಲಿಸಬಹುದಾಗಿದೆ. ಆದರೆ, ಬೆಳ್ಳಂದೂರು ಮತ್ತು ಅಗರ ಕೆರೆಗಳ ರಕ್ಷಣೆ ನಿಟ್ಟಿನಲ್ಲಿ ಎನ್‌ಜಿಟಿ ಹೇರಿರುವ ಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು’ ಎಂದ ಅವರು, ‘ಎನ್‌ಜಿಟಿ ಆದೇಶವನ್ನು ಪೂರ್ವಾನ್ವಯ ಆಗದಂತೆ ಜಾರಿಗೊಳಿಸಿದಲ್ಲಿ ಯಾವುದೇ ಕಟ್ಟಡಗಳನ್ನು ನೆಲಸಮಗೊಳಿಸುವ ಅಗತ್ಯ ಕಂಡುಬರದು’ ಎಂದರು.

ರಾಜ್ಯ ಸರ್ಕಾರ ಹಾಗೂ ರಿಯಲ್ ಎಸ್ಟೇಟ್ ಕಂಪೆನಿಗಳು ಎನ್‌ಜಿಟಿ ಆದೇಶವನ್ನೇ ಪ್ರಶ್ನಿಸಿವೆ. ಆದರೆ, ಎನ್‌ಜಿಟಿ ಕಾಯ್ದೆಯ ಸೆಕ್ಷನ್ 15 (1) (ಸಿ) ಪ್ರಕಾರ ಪರಿಸರ ಸಂರಕ್ಷಣೆ ಮತ್ತು ಪುನಶ್ಚೇತನ ಕುರಿತು ಈ ರೀತಿಯ ಆದೇಶ ನೀಡಬಹುದಾಗಿದೆ ಎಂದು ಅವರು ಒತ್ತಿಹೇಳಿದರು.

ಎನ್‌ಜಿಟಿಯು ಜಾರಿಯಲ್ಲಿರುವ ಯಾವುದೇ ಕಾನೂನನ್ನು ತಿರುಚುವ ಹಾಗೂ ಕಾಯ್ದೆಯನ್ನು ತಿದ್ದುವ ಕೆಲಸಕ್ಕೆ ಮುಂದಾಗಿಲ್ಲ. ಬದಲಿಗೆ, ಅಕ್ರಮವಾಗಿ ತಲೆ ಎತ್ತುವ ಮೂಲಕ ಪರಿಸರಕ್ಕೆ ಮಾರಕವಾದ ಕೈಗಾರಿಕೆಗಳನ್ನು ಸ್ಥಳಾಂತರಿಸುವ ನಿಟ್ಟಿನಲ್ಲಿ ಬಫರ್ ವಲಯವನ್ನು ವಿಸ್ತರಿಸಿದೆ ಎಂದು ಅವರು ತಿಳಿಸಿದರು.

‘ದೆಹಲಿಯ ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಡೀಸೆಲ್ ವಾಹನಗಳ ಸಂಚಾರ ನಿಷೇಧಿಸಿ ಸುಪ್ರೀಂ ಕೋರ್ಟ್ ಆದೇಶಿಸಿದೆ. ಅಂತೆಯೇ ಎನ್‌ಜಿಟಿ ಸಹ ಬೆಂಗಳೂರು ಕೆರೆಗಳ ಸಂರಕ್ಷಣೆಗಾಗಿ ಬಫರ್ ವಲಯದ

ಮಿತಿ ಹೆಚ್ಚಿಸಿ ಆದೇಶಿಸಿದೆ’ ಎಂದು ಅವರು ಉದಾಹರಣೆ ನೀಡಿದರು.

‘ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಇಂತಹ ಉದಾಹರಣೆ ನೀಡುವುದು ತರವಲ್ಲ’ ಎಂದು ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಹಾಗೂ ಎಂ.ಆರ್. ಶಾ ನೇತೃತ್ವದ ಪೀಠ ಸಜನ್ ಪೂವಯ್ಯ ಅವರನ್ನು ತರಾಟೆಗೆ ತೆಗೆದುಕೊಂಡಾಗ, ತಮ್ಮ ಹೇಳಿಕೆ ಹಿಂದಕ್ಕೆ ಪಡೆಯುವುದಾಗಿ ಅವರು ತಿಳಿಸಿದರು.

‘ಬೆಂಗಳೂರು ನಗರದ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ರೂಪಿಸುವಾಗ 30 ಮೀಟರ್‌ಗೆ ಮಿತಿಗೊಳಿಸಲಾಗಿದ್ದ ಬಫರ್ ವಲಯವನ್ನು ವಿಸ್ತರಿಸುವ ಮೊದಲು ಅಧ್ಯಯನ ನಡೆಸಲಾಗಿದೆಯೇ’ ಎಂದು ಪೀಠ ಪ್ರಶ್ನಿಸಿತು.

30 ಮೀಟರ್ ಬಫರ್ ವಲಯದ ಮಿತಿಯನ್ನೂ ಉಲ್ಲಂಘಿಸಿದ್ದರಿಂದ ಬೆಂಗಳೂರಿನ ಕೆರೆಗಳು ಕಲುಷಿತಗೊಂಡಿವೆ. ಮುಂದಿನ ಪೀಳಿಗೆಗಾಗಿ ಕೆರೆಗಳನ್ನು ಸಂರಕ್ಷಿಸುವ ಅಗತ್ಯವಿದೆ. ಎನ್‌ಜಿಟಿಯು ನ್ಯಾಯಮೂರ್ತಿಗಳನ್ನು ಮಾತ್ರವಲ್ಲದೆ ವಿಷಯ ತಜ್ಞರನ್ನೂ ಒಳಗೊಂಡಿದೆ. ಕಾನೂನಿನ ಅಂಶಗಳನ್ನು ಆಧರಿಸಿ ಆದೇಶ ನೀಡದೆ, ತಾಂತ್ರಿಕ ಮಾಹಿತಿ ಆಧರಿಸಿಯೇ ಇಂತಹ ನಿರ್ದೇಶನ ನೀಡಿದೆ ಎಂದು ಅವರು ಸಮರ್ಥಿಸಿದರು. ಪ್ರಕರಣದ ವಿಚಾರಣೆ ಬುಧವಾರ ಮುಂದುವರಿಯಲಿದೆ.

## ಕೆರೆಗೆ ಕಸ: ವಾಹನಗಳು ಬಿಡಿಎ ವಶಕ್ಕೆ

**ಬೆಂಗಳೂರು:** ಬೆಳ್ಳಂದೂರು ಕೆರೆ ಬದಿಯಲ್ಲಿ ಕಟ್ಟಡ ತ್ಯಾಜ್ಯ ಮತ್ತು ಕಸವನ್ನು ಸುರಿಯುತ್ತಿದ್ದ ಎರಡು ವಾಹನಗಳು ಹಾಗೂ ಅವುಗಳ ಚಾಲಕರನ್ನು ಪಾಲಿಕೆಯ ಮಾರ್ಷಲ್‌ಗಳು ಮತ್ತು ಬಿಡಿಎ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

‘ವಾಹನಗಳಲ್ಲಿ ಪ್ಲಾಸ್ಟಿಕ್ ಕಸ ಮತ್ತು ಬೆಂಕಿಯನ್ನು ಹೊತ್ತಿಸುವ ತ್ಯಾಜ್ಯ ತಂದು ಸುರಿಯುತ್ತಿದ್ದರು. ಬೆಂಕಿ ಹೊತ್ತಿಕೊಳ್ಳುವ ಘಟನೆಗಳಿಗೆ ಕಡಿವಾಣ ಹಾಕಲು ಪಹರೆ ಕಾಯುತ್ತಿದ್ದಾಗ, ಕೆರೆ ಬದಿಯಲ್ಲಿನ ಖಾಸಗಿ ಜಾಗದಲ್ಲಿ ಕಸ ಸುರಿಯಲಾಗುತ್ತಿತ್ತು. ಆಗ ವಾಹನಗಳನ್ನು ವಶಕ್ಕೆ ಪಡೆದಿದ್ದೇವೆ’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಅಧಿಕಾರಿಗಳು ತಿಳಿಸಿದರು.

‘ಕೆಲವರು ಉದ್ದೇಶಪೂರ್ವಕವಾಗಿಯೇ ಕಸವನ್ನು ಕೆರೆಯ ಆವರಣದಲ್ಲಿ ಸುರಿಯುತ್ತಾರೆ, ಬೆಂಕಿ ಹಚ್ಚುತ್ತಾರೆ ಎಂಬ ಸಂಶಯ ನಮಗೆ ಮೊದಲಿನಿಂದಲೂ ಇದೆ. ಅದಕ್ಕೆ, ಈಗ ಸಿಕ್ಕಿರುವ ಬೆಂಕಿ ಹೊತ್ತಿಸುವ ತ್ಯಾಜ್ಯ ಪುಷ್ಟಿ ನೀಡುತ್ತಿದೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

‘ಕೆರೆಯ ಆವರಣ ಬಹಳ ವಿಸ್ತಾರವಾಗಿದೆ. ಇಲ್ಲಿ ಮಾರ್ಷಲ್‌ಗಳು ಕೆರೆ ಸುತ್ತಲೂ ಗಸ್ತು ತಿರುಗಲು ದಾರಿಯೂ ಇಲ್ಲ. ಕೆರೆಯಂಗಳದಲ್ಲಿ ಕಸ ಸುರಿಯಲು ಯಾರಾದರೂ ಬಂದರೆ, ಆ ಕುರಿತು ಸುತ್ತಮುತ್ತಲಿನ ಎತ್ತರದ ಅಪಾರ್ಟ್‌ಮೆಂಟ್‌ಗಳಲ್ಲಿನ ನಿವಾಸಿಗಳು ಮಾರ್ಷಲ್‌ಗಳಿಗೆ ಮಾಹಿತಿ ನೀಡಬೇಕು’ ಎಂದು ಅವರು ಮನವಿ ಮಾಡಿದರು.

ಕೆರೆಯ ಸಮೀಪದ ಹರಯಾನ ವಸತಿ ಸಮುಚ್ಚಯದ ಕಾಲುವೆ ಬಳಿ ಸೋಮವಾರ ಬೆಳಿಗ್ಗೆ 5.30ರ ಹೊತ್ತಿಗೆ ಬೆಂಕಿ ಕಾಣಿಸಿಕೊಂಡಿತ್ತು. ‘ಬೆಂಕಿ ಕಾಣಿಸಿಕೊಂಡ ಪ್ರದೇಶವು ಕೆರೆಯ ಮೀಸಲು ಪ್ರದೇಶದಿಂದ ಹೊರಗಿದೆ’ ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದ್ದರು.

# ಕೆರೆ ಒಡಲಲ್ಲಿ ತ್ಯಾಜ್ಯ: ಕಳವಳ

ಪ್ರಜಾವಾಣಿ ವಾರ್ತೆ

**ಹೊಸಕೋಟೆ:** ಪಟ್ಟಣದ ಹೊರವಲಯದಲ್ಲಿರುವ ಅಮಾನಿ ದೊಡ್ಡಕೆರೆ ಒಡಲಿಗೆ ಕಿಡಿಗೇಡಿಗಳು ತ್ಯಾಜ್ಯ ಸುರಿಯುವ, ಬೆಂಕಿ ಹಾಕುವ ಕೃತ್ಯ ಎಸಗುತ್ತಿದ್ದಾರೆ.

ಈ ಕೆರೆ ಪಟ್ಟಣದ ಜಲಮೂಲವೂ ಹೌದು. ಸಾವಿರಾರು ವಲಸೆಹಕ್ಕಿಗಳಿಗೆ ಆಶ್ರಯ ತಾಣವೂ ಆಗಿದೆ. ಪದೇ ಪದೆ ಬೆಂಕಿ ಹಚ್ಚುವುದರಿಂದ ಬರುವ ಹೊಗೆ ಪರಿಸರಕ್ಕೆ ಹಾನಿ ಮಾಡುತ್ತಿದೆ. ಇಲ್ಲಿ ಬೀಡು ಬಿಟ್ಟಿರುವ ಫೆಲಿಕಾನ್ ಹಕ್ಕಿಗಳಿಗೂ ತೊಂದರೆಯಾಗುತ್ತಿದೆ.

ಕೆರೆಯನ್ನು ಉಳಿಸಿ ಅಭಿವೃದ್ಧಿಪಡಿಸುವಲ್ಲಿ ಪಟ್ಟಣದ ಯುವಕರ ತಂಡವೊಂದು ಕಳೆದೆರೆಡು ವರ್ಷಗಳಿಂದ ಕಾರ್ಯಕ್ರಮ ನಡೆಸಿದ್ದಾರೆ. ಕೆರೆಯ ಒಡಲಿಗೆ ತ್ಯಾಜ್ಯ ಹಾಕದಂತೆ ಶ್ರಮಿಸುತ್ತಿದ್ದಾರೆ. ಕೆರೆಯ ಕಟ್ಟೆಯ ಮೇಲೆ ಅರಣ್ಯ ಇಲಾಖೆ ಸಹಕಾರದೊಂದಿಗೆ ಸಾವಿರಕ್ಕೂ ಹೆಚ್ಚು ಸಸಿಗಳನ್ನು ಕಳೆದ ಪರಿಸರ ದಿನದಂದು ನೆಡಲಾಗಿದೆ. ಸ್ವಚ್ಛತೆ ನಡೆದಿದೆ. ಆದರೂ ಇತ್ತೀಚೆಗೆ ತ್ಯಾಜ್ಯ



ಕೆರೆಗೆ ಹೋಗುವ ರಸ್ತೆಯ ಬದಿಗಳಲ್ಲೇ ತ್ಯಾಜ್ಯ ಎಸೆದಿರುವ ದೃಶ್ಯ

ತಂದು ಹಾಕುವವರು ಹೆಚ್ಚಿದ್ದಾರೆ. ರಜಾ ದಿನಗಳಲ್ಲಿ ಕುಡುಕರು, ಮೋಜು ಮಾಡಲು ಬರುವವರ ಕಾಟ ಹೆಚ್ಚಿದೆ ಎನ್ನುತ್ತಾರೆ ಕೆರೆಯ ಪಕ್ಕದಲ್ಲಿರುವ ರೈತ ಗೋವಿಂದರಾಜು.

ಕೆರೆಯನ್ನು ಸಂರಕ್ಷಿಸಿ ಅಭಿವೃದ್ಧಿ ಪಡಿಸುವಲ್ಲಿ ‘ಪಾರಂಪರಿಕ ತಾಣ ’ಎಂದು ಘೋಷಣೆ ಮಾಡುವಂತೆ ಕಳೆದ 9 ತಿಂಗಳಿಂದ ಸಂಬಂಧಿಸಿದ ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ನೆಟ್ಟ ಗಿಡಗಳನ್ನು ಸಂರಕ್ಷಿಸಲು ಅರಣ್ಯ ಇಲಾಖೆಯವರೂ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ತ್ಯಾಜ್ಯ ವಸ್ತುಗಳನ್ನು ಹಾಕುವುದು ತಡೆಗಟ್ಟಲೂ ಯಾರೊಬ್ಬರು ಮುಂದೆ ಬರುತ್ತಿಲ್ಲ ಎಂದು ಸ್ಥಳೀಯರಾದ ಸಿ.ಎಸ್.ನಾಗಭೂಷಣ್ ಅಳಲು ತೋಡಿಕೊಂಡರು.

ಪರಿಷ್ಕೃತ ಡಿಪಿಆರ್: ‘ಸುಪ್ರೀಂ’ಗೆ ಮಾಹಿತಿ

# ಮೇಕೆದಾಟು ಯೋಜನೆ: ಪ್ರತಿಕ್ರಿಯೆಗೆ ಸೂಚನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮೇಕೆದಾಟು ಯೋಜನೆ ಕುರಿತು ಕರ್ನಾಟಕ ಸರ್ಕಾರವು ಕೇಂದ್ರ ಜಲ ಆಯೋಗ (ಸಿಡಬ್ಲ್ಯೂಸಿ)ಕ್ಕೆ ಸಲ್ಲಿಸಿರುವ ಪರಿಷ್ಕೃತ ವಿಸ್ತೃತ ಯೋಜನಾ ವರದಿ (ಡಿಪಿಆರ್) ಕುರಿತು ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ತಮಿಳುನಾಡು, ಕೇರಳ ಮತ್ತು ಪುದುಚೇರಿ ಸರ್ಕಾರಗಳಿಗೆ ಸೂಚಿಸಿದೆ.

ಯೋಜನೆಯನ್ನು ವಿರೋಧಿಸಿ ತಮಿಳುನಾಡು ಸಲ್ಲಿಸಿದ್ದ ವಿಶೇಷ ಮೇಲ್ಮನವಿಯ ವಿಚಾರಣೆಯನ್ನು ಮಂಗಳವಾರ ನಡೆಸಿದ ನ್ಯಾಯಮೂರ್ತಿ ಎ.ಎಂ. ಖನ್ವಿಲ್ಕರ್ ನೇತೃತ್ವದ ಪೀಠ, ಕಾವೇರಿ ಕಣಿವೆಯ ಇತರ ರಾಜ್ಯಗಳ ಪ್ರತಿಕ್ರಿಯೆಗೆ ನಾಲ್ಕು ವಾರಗಳ ಕಾಲಾವಕಾಶ ನೀಡಿ ವಿಚಾರಣೆಯನ್ನು ಮುಂದೂಡಿತು.

ಮೇಕೆದಾಟು ಬಳಿ ಕಾವೇರಿ ನದಿಯ 67.16 ಟಿಎಂಸಿ ಅಡಿ ಹೆಚ್ಚುವರಿ ನೀರನ್ನು ಸಂಗ್ರಹಿಸುವ ಉದ್ದೇಶದಿಂದ ಸಮಾನಾಂತರ ಜಲಾಶಯ ನಿರ್ಮಿಸಲಾಗುವುದು. ಯೋಜನೆ ಅಡಿ 400 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುವುದು ಹಾಗೂ ಬೆಂಗಳೂರು, ರಾಮನಗರಗಳ ಜನತೆಗೆ ಕುಡಿಯುವ ನೀರು ಪೂರೈಸಲಾಗುವುದು ಎಂದು ರಾಜ್ಯ ಸರ್ಕಾರ ನ್ಯಾಯಪೀಠಕ್ಕೆ ಮಾಹಿತಿ ನೀಡಿತು

ಕಾವೇರಿ ನದಿ ನೀರನ್ನು ಹಂಚಿಕೆ ಮಾಡಿ ಸುಪ್ರೀಂ ಕೋರ್ಟ್ ಕಳೆದ ವರ್ಷ ತೀರ್ಪು ನೀಡಿದ ನಂತರ ಮೇಕೆದಾಟು ಯೋಜನೆ ಕುರಿತು ರಾಜ್ಯ ಸರ್ಕಾರ ಸಲ್ಲಿಸಿದ್ದ ಡಿಪಿಆರ್‌ಗೆ ಸಮ್ಮತಿಸಿದ್ದ ಸಿಡಬ್ಲ್ಯೂಸಿ, ಪರಿಷ್ಕೃತ ಡಿಪಿಆರ್ ಸಲ್ಲಿಸುವಂತೆ ಸೂಚಿಸಿತ್ತು. ಇದನ್ನು ಪ್ರಶ್ನಿಸಿ ತಮಿಳುನಾಡು ಮೇಲ್ಮನವಿ ಸಲ್ಲಿಸಿದೆ.

ಇದು ಬರೀ ತೈಲವಲ್ಲ!
ಕೂದಲ ಸಂರಕ್ಷಣೆಗೆ ರಾಮಬಾಣ
ಬ್ರಹ್ಮರ್ಷಿ ಆನಂದ ಗುರೂಜಿ ಸಿದ್ಧಿಪೀಠದ ಉತ್ಪನ್ನಗಳು
ಶಕುಂತಲಾ
ಹರ್ಬಲ್ ಹೇರ್ ಆಯಿಲ್
ಇದನ್ನು ಬಳಸಿ ಈ ತೊಂದರೆಗಳನ್ನು ತಡೆಗಟ್ಟಿ
• ಶುಷ್ಕತೆ ಹಾಗೂ ನಿರ್ಜೀವ ಕೂದಲು • ಕೂದಲ ಕೊನೆ ಸೀಳುವಿಕೆ
ಕೂದಲು ಉದುರುವಿಕೆ • ದುರ್ಬಲ ಕೂದಲು • ತಲೆಹೊಟ್ಟು • ಬಾಲನೆರೆ
E-mail: aj_healthcare@yahoo.co.in ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 8762226000 | ಎಲ್ಲ ಮೆಡಿಕಲ್ ಅಂಗಡಿಗಳಲ್ಲಿ ದೊರೆಯುತ್ತದೆ.

# ಜಿ.ಪಂ. ಸದಸ್ಯ ವಿರುದ್ಧ ಪಿಡಿಒ ದೂರು

**ಬೆಂಗಳೂರು:** ಸರ್ಕಾರಿ ಸೇವೆಗೆ ತಡೆ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿ ಜಿಲ್ಲಾ ಪಂಚಾಯಿತಿ ಸದಸ್ಯ ಕೆಂಪರಾಜು ಹಾಗೂ ಗ್ರಾಮ ಪಂಚಾಯಿತಿ ಸದಸ್ಯೆ ಲತಾದೇವಿ ವಿರುದ್ಧ ಮಂಡೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಪಿ.ಎ. ಪೂಣಚ್ಚ ಅವರು ವಸಂತನಗರ ಠಾಣೆಗೆ ದೂರು ಸಲ್ಲಿಸಿದ್ದಾರೆ.

‘ನನ್ನನ್ನು ಜನವರಿ 1ರಂದು ಬಂಡಿಕೊಡಿಗೆ ಗ್ರಾಮ ಪಂಚಾಯಿತಿಗೆ ವರ್ಗ ಮಾಡಲಾಗಿತ್ತು. ಇದರ ವಿರುದ್ಧ ಕೆಎಟಿಯಲ್ಲಿ ತಡೆಯಾಜ್ಞೆ ತಂದು ಮಂಡೂರು ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದೆ. 14ನೇ ಹಣಕಾಸಿನ ಕ್ರಿಯಾಯೋಜನೆಗೆ ಅನುಮೋದನೆ ಪಡೆಯಲು ನಾನು ಜನವರಿ 7ರಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಚೇರಿಗೆ ಹೋಗಿದ್ದೆ. ಆ ದಿನ ಸಂಜೆ ಕೆಂಪರಾಜು ಹಾಗೂ ಲತಾದೇವಿ ಕರೆ ಮಾಡಿ ಬೆದರಿಕೆ ಹಾಕಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡಲು ಇಷ್ಟವಿಲ್ಲ ಎಂದು ಬರೆದುಕೊಡಬೇಕು ಎಂಬುದಾಗಿ ಒತ್ತಾಯಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಲತಾದೇವಿ ಅವರು ಶ್ರೀರಾಮ್ ಪ್ರಾಪರ್ಟೀಸ್‌ಗೆ 1 ಎಕರೆ 12 ಗುಂಟೆ ಮಾರಿದ್ದರು. ಅದನ್ನು ಕಡಿಮೆ ಬೆಲೆಗೆ ಮಾರಿದ್ದು, ಬೆಲೆ ಹೆಚ್ಚಾಗಿರುವ ಕಾರಣ ಅಧಿಕ ಬೆಲೆ ಕೊಡಿಸಬೇಕು ಎಂದು ಒತ್ತಡ ಹೇರಿದ್ದರು. ಕಾನೂನು ಪ್ರಕಾರ ಈ ರೀತಿ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದೆ. ಈ ಕಾರಣಕ್ಕೆ ದ್ವೇಷ ಸಾಧನೆ ಮಾಡುತ್ತಿದ್ದಾರೆ. ಜತೆಗೆ, ಈ ಹಿಂದೆ ಮೂರು ಸಲ ಅಮಾನತು ಆಗಿರುವ ವೆಂಕಟರಂಗನ್ ಎಂಬುವರನ್ನು ಪಿಡಿಒ ಮಾಡಲು ನನಗೆ ತೊಂದರೆ ಕೊಡುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

## ಇಂದಿರಾ ನಗರದಲ್ಲಿ ಎಂಪವರ್ ಶಾಖೆ ಆರಂಭ

**ಬೆಂಗಳೂರು:** ದಿ ಆದಿತ್ಯ ಬಿರ್ಲಾ ಎಜುಕೇಷನ್ ಟ್ರಸ್ಟ್ ವತಿಯಿಂದ ಮಾನಸಿಕ ಆರೋಗ್ಯ, ಕಾಯಿಲೆಗಳ ಕುರಿತು ಜಾಗೃತಿ ಮೂಡಿಸಲು ಇಂದಿರಾ ನಗರದಲ್ಲಿ ಎಂಪವರ್ ಕೇಂದ್ರವನ್ನು ಭಾನುವಾರ ಆರಂಭಿಸಲಾಗಿದೆ. ಹಿರಿಯ ಮನೋವೈದ್ಯ ಡಾ.ವಿನೋದ್ ಕುಮಾರ್ ನೇತೃತ್ವದಲ್ಲಿ ಕೇಂದ್ರ ಕಾರ್ಯನಿರ್ವಹಿಸಲಿದೆ. ಎಂಪವರ್ ಕೇಂದ್ರವನ್ನು ಈಗಾಗಲೇ 2016ರಲ್ಲಿ ಮುಂಬೈನಲ್ಲಿ ಪ್ರಾರಂಭಿಸಲಾಗಿದೆ.

## ರಕ್ಷಾ ರಾಮಯ್ಯ ನೇಮಕ

**ಬೆಂಗಳೂರು:** ರಾಷ್ಟ್ರೀಯ ಯುವ ಕಾಂಗ್ರೆಸ್ಸಿನ ರಾಷ್ಟ್ರೀಯ ಸಾಮಾಜಿಕ ಜಾಲತಾಣದ ಸಂಚಾಲಕರಾಗಿ ರಕ್ಷಾ ರಾಮಯ್ಯ ಅವರನ್ನು ನೇಮಿಸಲಾಗಿದೆ.



ರಾಜ್ಯ ಯುವ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದ ರಕ್ಷಾ ಅವರಿಗೆ, ಈ ಮೂಲಕ ಕಾಂಗ್ರೆಸ್ ಪಕ್ಷ ಹೆಚ್ಚಿನ ಹೊಣೆಗಾರಿಕೆ ನೀಡಿದೆ. ಅವರು ಮಾಜಿ ಸಚಿವ ಎಂ.ಆರ್. ಸೀತಾರಾಂ ಅವರ ಪುತ್ರ.

KOF Since 1984
Safal
ಸಫಲ್ ಪ್ರೀಮಿಯಂ
ರಿಫೈನ್ಡ್ ಸೂರ್ಯಕಾಂತಿ ಎಣ್ಣೆ
ಪರಿಶುದ್ಧ ತೈಲ
ಪರಿಪೂರ್ಣ ಆರೋಗ್ಯ
Online Orders : www.esafal.co.in
www.kof.co.in

TeamLease Putting India to Work
ಟೀಂಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ
ದೂರವಾಣಿ: +91 80 68243000 ಫ್ಯಾಕ್ಸ್: +91 80 68243001
corporateaffairs@teamlease.com | www.teamleasegroup.com
ನಿರ್ದೇಶಕರುಗಳ ಸಭೆಯ ನೋಟೀಸು
ಈ ಮೂಲಕ ನೋಟೀಸು ನೀಡಲಾಗುತ್ತಿರುವುದೇನೆಂದರೆ, ಸೆಕ್ಯೂರಿಟೀಸ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್ (ಎಲ್‌ಒಡಿಆರ್), 2015, ನಿಬಂಧನೆಗಳ 47(1)(ಎ)ರ ನಿಬಂಧನೆಯ ಅನುಸಾರ, ಕಂಪನಿಯ ನಿರ್ದೇಶಕರುಗಳ ಸಭೆಯನ್ನು ಮಂಗಳವಾರ, 29ನೇ ಜನವರಿ, 2019 ರಂದು ಭಾರತೀಯ ಕಾಲಮಾನ ಮಧ್ಯಾಹ್ನ 2 ಗಂಟೆಗೆ 31ನೇ ಡಿಸೆಂಬರ್, 2018 ರಂದು ತ್ರೈಮಾಸಿಕಕ್ಕೆ ಕೊನೆಗೊಂಡ ಒಗ್ಗೂಡಿತ ಅಪರಿಶೋಧಿತ, ಪ್ರತ್ಯೇಕಿತ ಆರ್ಥಿಕ ಫಲಿತಾಂಶಗಳನ್ನು ಮತ್ತು ಇತರ ಅಂಶಗಳ ಜೊತೆಯಲ್ಲಿ ಪರಿಗಣಿಸುವ ಸಲುವಾಗಿ ನಡೆಸಲಾಗುತ್ತದೆ.
ನಿರ್ದೇಶಕರುಗಳ ಸಭೆಯ ನೋಟೀಸಿನ ಮಾಹಿತಿಯು ಕಂಪನಿಯ ವೆಬ್‌ಸೈಟ್ www.teamleasegroup.comನಲ್ಲಿ ಹಾಗೂ ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು ನ್ಯಾಶನಲ್ ಸ್ಟಾಕ್ ಎಕ್ಸ್‌ಚೆಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಇಲ್ಲಿ ಕೂಡ ಲಭ್ಯವಿದೆ.
ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
ಅಲಕ ಚಂದ
ಕಂಪನಿ ಸೆಕ್ರಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್
ಸ್ಥಳ: ಬೆಂಗಳೂರು
ದಿನಾಂಕ: ಜನವರಿ 22, 2019



**ಸಂದೇಶ ಪ್ರಶಸ್ತಿ...** ಕರ್ನಾಟಕ ಪ್ರಾಂತೀಯ ಕೆಥೋಲಿಕ್ ಧರ್ಮಾಧ್ಯಕ್ಷರ ಮಂಡಳಿಯ ಆಶ್ರಯದಲ್ಲಿರುವ ಸಂದೇಶ ಸಂಸ್ಕೃತಿ ಹಾಗೂ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಮಂಗಳವಾರ ಸಾಧಕರಾದ ಸಿಸ್ಟರ್ ಜಾನ್ಸಿ, ಫಾ. ಬೆನ್‌ಬ್ರಿಟ್ಟೊ ಪ್ರಭು, ಪ್ರಸನ್ನ ಹೆಗ್ಗೋಡು,ಮಂಜಮ್ಮ ಜೋಗತಿ, ಬಿ.ಎಂ. ರೋಹಿಣಿ, ಬಿ.ಎಂ. ಹನೀಫ್; ಫಾ. ಟಿಜಿ ಥೋಮಸ್ ಅವರಿಗೆ ಬಿಷಪ್ ಫಾ. ಪೀಟರ್ ಪೌಲ್ ಡಿಸೋಜ ಪ್ರಶಸ್ತಿ ಪ್ರದಾನ ಮಾಡಿದರು – ಪ್ರಜಾವಾಣಿ ಚಿತ್ರ

# ಇಂಗ್ಲಿಷ್ ಶಾಲೆ ಆರಂಭಕ್ಕೆ ಚಂಪಾ ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕನ್ನಡ ಕಲಿಯುವ ಮಕ್ಕಳಿಲ್ಲ ಎನ್ನುವ ಬೇಜವಾಬ್ದಾರಿ ನಡೆಯಿಂದ ಇಂಗ್ಲಿಷ್ ಶಾಲೆ ಆರಂಭಿಸುತ್ತಿರುವ ಸರ್ಕಾರದ ನಿರ್ಧಾರ ಸರಿಯಲ್ಲ’ ಎಂದು ಸಾಹಿತಿ ಚಂದ್ರಶೇಖರ ಪಾಟೀಲ ಆಕ್ರೋಶ ವ್ಯಕ್ತಪಡಿಸಿದರು.

ಮೈಕೊ ಕನ್ನಡ ಬಳಗ ನಗರದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕರುನಾಡ ಉತ್ಸವ, 7ನೇ ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕನ್ನಡ, ಕನ್ನಡಿಗರನ್ನು ಹತ್ತಿಕ್ಕುವ ಹಾಗೂ ಕರ್ನಾಟಕವನ್ನು ವಿಭಜಿಸುವ ಕಿಡಿಗೇಡಿಗಳ ವಿರುದ್ಧ ಹೋರಾಟಗಳನ್ನು ರೂಪಿಸಬೇಕು. ಇದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ’ ಎಂದರು.

ರೆವರೆಂಡ್ ಫರ್ಡಿನೆಂಡ್ ಕಿಟ್ಟೆಲ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಾಹಿತಿ ಕಾಳೇಗೌಡ ನಾಗವಾರ, ‘ಕಿಟ್ಟೆಲ್ ಅವರು ಕನ್ನಡ ನಿಘಂಟು ರಚನಾ ಕಾರ್ಯ ಮಾಡಿದ್ದು, ಕನ್ನಡಕ್ಕಾಗಿ ಅಪಾರ ಕೊಡುಗೆ ನೀಡಿರುವುದು ಸ್ಮರಣೀಯ’ ಎಂದರು.

ಕರುನಾಡ ಭಗೀರಥ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕಾಮೇಗೌಡ, ‘ಕನ್ನಡ ಉಳಿಸಿ, ಉಳಿಸಿ ಎನ್ನುವ ಬದಲು, ನಾಡು–ನುಡಿಗೆ ಕೇಡು ಬಗೆಯುವವರನ್ನು ಬಗ್ಗುಬಡಿಯಿರಿ’ ಎಂದು ಹೇಳಿದರು.

ಕರುನಾಡ ಯುವ ವಿಜ್ಞಾನಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡ್ರೋನ್ ಖ್ಯಾತಿಯ ಪ್ರತಾಪ್, ‘ಒಬ್ಬ ರೈತನ ಮಗ ಸರ್ಕಾರಿ ಶಾಲೆಯಲ್ಲಿ ಓದಿ ವಿಶ್ವಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯ. ಸಾಧನೆ ಯಾರ ಸ್ವತ್ತೂ ಅಲ್ಲ, ಸತತ ಪರಿಶ್ರಮಪಟ್ಟರೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂಬುದಕ್ಕೆ ನಾನೇ ಉದಾಹರಣೆ’ ಎಂದರು.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರಿಗೆ ಬಳಗವು ಕಳೆದ 7 ವರ್ಷಗಳಿಂದ ₹1 ಲಕ್ಷ ನಗದು ಹಾಗೂ ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸುತ್ತ ಬಂದಿದೆ.

**ಚುಟುಕು ಸುದ್ದಿ**

## ಅರ್ಜಿ ಆಹ್ವಾನ

ಕುಂಚಿಟಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 2018–19ನೇ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಸಮುದಾಯದ ಗ್ರಾಮೀಣ ಬಡ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿ, ಡಿ.ಇಡಿ, ಡಿಪ್ಲೊಮಾ, ಪದವಿ, ಕೃಷಿ ವಿಜ್ಞಾನ, ಬಿ.ಇ, ವೈದ್ಯಕೀಯ, ಸ್ನಾತಕೋತ್ತರ ಅಧ್ಯಯನ ಮಾಡುತ್ತಿರುವವರು ಜ.31 ರೊಳಗೆ ಅರ್ಜಿ ಸಲ್ಲಿಸಬಹುದು. ಸಂಪರ್ಕಕ್ಕಾಗಿ– 9844526677.

## ಪ್ರಸಾದನ ತರಬೇತಿ ಕಾರ್ಯಾಗಾರ

ನಗರ ಕೇಂದ್ರ ಗ್ರಂಥಾಲಯ ಕುಮಾರಸ್ವಾಮಿ ಬಡಾವಣೆ ಶಾಖೆಯು ಗಣರಾಜ್ಯೋತ್ಸವದ ನಿಮಿತ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಜ.23 ರಿಂದ 24 ರವರೆಗೆ ರಂಗಸಾಗರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ ಸಹಯೋಗದಲ್ಲಿ ಪ್ರಸಾದನ ಕಲಾವಿದ ಶಿವಕುಮಾರ್ ಅವರಿಂದ ಪ್ರಸಾದನ ತರಬೇತಿ ಕಾರ್ಯಾಗಾರ ನಡೆಯಲಿದೆ.

ಜ.24 ಹಾಗೂ 25 ರಂದು ಸಂಜೆ 5ಕ್ಕೆ ಜ್ಞಾಪಕ ಶಕ್ತಿ ಪರೀಕ್ಷೆ, ಚಿತ್ರಕಲಾ ಸ್ಪರ್ಧೆಗಳು ಜರುಗಲಿವೆ. ಆಸಕ್ತರು ಜ.23ರೊಳಗಾಗಿ ಹೆಸರು ನೋಂದಾಯಿಸಿಕೊಳ್ಳಬಹುದು. **ಸಂಪರ್ಕಕ್ಕೆ– 9448013383**

**ನಿಧನ ವಾರ್ತೆ**

## ಎ.ಎಸ್.ಸರೋಜಾ

**ಮುಂಡಗೋಡ:** ಇಲ್ಲಿನ ಪಟ್ಟಣ ಪಂಚಾಯ್ತಿ ಮಾಜಿ ಅಧ್ಯಕ್ಷ ಎ.ಎನ್. ಸುಬ್ರಾಯ ರಾವ್ ಅವರ ಪತ್ನಿ ಎ.ಎಸ್. ಸರೋಜಾ (80) ಸೋಮವಾರ ಇಲ್ಲಿ ನಿಧನರಾದರು.



ಮಾರ್ಕೆಟ್ ರಸ್ತೆ ನಿವಾಸಿಯಾದ ಅವರು ನಗರ ಪಂಚಾಯಿತಿ ಸದಸ್ಯೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ಸಮಾಜ ಕಲ್ಯಾಣ ಸಲಹಾ ಮಂಡಳಿಯ ತಾಲ್ಲೂಕು ಘಟಕದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಅವರಿಗೆ ‘ಪ್ರಜಾವಾಣಿ’ ನಿವೃತ್ತ ಸುದ್ದಿ ಸಂಪಾದಕ ಎ.ಎಸ್. ನಾರಾಯಣ ರಾವ್ ಸೇರಿ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ಮೃತರ ಇಚ್ಛೆಯಂತೆ ಕಣ್ಣುಗಳನ್ನು ದಾನ ಮಾಡಲಾಯಿತು. ಅಂತ್ಯಕ್ರಿಯೆ ಸಂಜೆ ನಡೆಯಿತು.

AMRITA VISHWA VIDYAPEETHAM | School of Engineering
Inspired by Love, Guided by Knowledge
B.Tech. Admissions 2019
APPLY NOW Scan QR Code
amrita.edu/btech2019
Knowledge enriched by human values...
Selection is based on the rank secured in
■ JEE Mains 2019 (Joint Entrance Examination)
■ AEEE 2019 (Amrita Entrance Examination – Engineering)
For more information, please contact 1800 425 90009 btech@amrita.edu

MARUTI SUZUKI COMMERCIAL
ಉದ್ಯೋಗ ಅವಕಾಶಗಳು
ಮಾರುತಿ ಸುಜುಕಿ ವಾಣಿಜ್ಯ ಶೋರೂಂಗಳಲ್ಲಿ
ಸ್ಥಳ : ಪೀಣ್ಯ, ಲಾಲ್‌ಬಾಗ್, ಹೆಬ್ಬಾಳ, ಮಾಗಡಿರಸ್ತೆ, ಜಿಗಣಿ, ಹೊಸಕೋಟೆ, ದೊಮ್ಮಸಂದ್ರ, ಕೆ.ಆರ್.ಪುರಂ, ಮೈಸೂರು ರೋಡ್, ಯಲಹಂಕ, ಬೊಮ್ಮಸಂದ್ರ ಮತ್ತು ಮುರುಗೇಶ್‌ಪಾಳ್ಯ
ಸೇಲ್ಸ್ ಮ್ಯಾನೇಜರ್ — ಅನುಭವ: ಕನಿಷ್ಠ 5 ವರ್ಷ; ವಿದ್ಯಾರ್ಹತೆ: ಪದವಿ
ಟೀಮ್ ಲೀಡರ್ — ಅನುಭವ: ಕನಿಷ್ಠ 3 ವರ್ಷ; ವಿದ್ಯಾರ್ಹತೆ: 10+2
ಕಮರ್ಶಿಯಲ್ ಸೇಲ್ಸ್ ಆಫೀಸರ್ — ಅನುಭವ: ಕನಿಷ್ಠ 0-2 ವರ್ಷ; ವಿದ್ಯಾರ್ಹತೆ: 10+2
ಅತ್ಯಾಕರ್ಷಕ ಸಂಬಳ ಮತ್ತು ಇನ್ಸೆಂಟೀವ್ ನೀಡಲಾಗುವುದು
ಪ್ರಯಾಣ ಮತ್ತು ಆಹಾರ ಭತ್ಯೆ ಹೆಚ್ಚುವರಿ ನೀಡಲಾಗುವುದು
ನಿಮ್ಮ ಸಿ.ವಿಯನ್ನು ಇ-ಮೇಲ್ ಮುಖಾಂತರ ಕಳಿಸಿ:
mohit.lakhotia@maruti.co.in
ಸಂಪರ್ಕಿಸಿ: 07022392266
SUPER CARRY A POWERFUL MINI TRUCK

ಸಿಲ್ಕ್ ಮಾರ್ಕ್ – ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರದ ಒಂದು ಉಪಕ್ರಮ
CENTRAL SILK BOARD INDIA
SILK MARK INDIA Your Assurance of Pure Silk
ಭಾರತದ ಏಕೈಕ 100% ಪರಿಶುದ್ಧ ರೇಷ್ಮೆ ವಸ್ತ್ರಗಳ ಸಿಲ್ಕ್ ಎಕ್ಸ್‌ಪೋ ಬೆಂಗಳೂರಿನಲ್ಲಿ ಇಂದಿನಿಂದ ಪ್ರಾರಂಭ
100% ಪರಿಶುದ್ಧ ರೇಷ್ಮೆ ವಸ್ತ್ರಗಳ ಪ್ರದರ್ಶನ ಹಾಗೂ ಮಾರಾಟ
ವಿಶಿಷ್ಟ ಶಾಪಿಂಗ್ ಅನುಭವಕ್ಕಾಗಿ ಭೇಟಿ ನೀಡಿ...
SILK MARK EXPO 2019 BANGALORE 23rd - 28th Jan. 2019
ಕರ್ನಾಟಕ ಚಿತ್ರಕಲಾ ಪರಿಷತ್ ಕುಮಾರ ಕೃಪ ರಸ್ತೆ, ಬೆಂಗಳೂರು
2019 – ಜನವರಿ 23 ರಿಂದ 28 ರವರೆಗೆ
ಸಮಯ: ಬೆಳಿಗ್ಗೆ 10:30 ರಿಂದ ಸಂಜೆ 7:00 ರವರೆಗೆ
ವಿಶೇಷ ಆಕರ್ಷಣೆ Vanya Eco-friendly Indian Silks
ಸಿಲ್ಕ್ ಮಾರ್ಕ್ ಆರ್ಗನೈಜೇಶನ್ ಆಫ್ ಇಂಡಿಯಾ, ಬೆಂಗಳೂರು. | ಫೋ: 94491 11481 | www.silkmarkindia.com

प्रसार भारती India's Public Service Broadcaster
ಡಿಡಿ ಫ್ರೀ ಡಿಶ್‌ಗಾಗಿ 38ನೇ ಆನ್‌ಲೈನ್ ಇ–ಹರಾಜು
DD Free Dish
ದೂರದರ್ಶನದ ಡಿಡಿ ಫ್ರೀ ಡಿಶ್ ಡಿಟಿಎಚ್ ಸೇವೆಗಳಿಗೆ ಖಾಲಿ ಇರುವ ಎಂಪಿಇಜಿ–2 ಸ್ಲಾಟ್‌ಗಳನ್ನು ಭರ್ತಿ ಮಾಡಲು, 38ನೇ ಆನ್‌ಲೈನ್ ಇ–ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಪ್ರಸಾರ ಭಾರತಿ ಇವರು ಖಾಸಗಿ ಟಿವಿ ಚಾನಲ್‌ಗಳಿಂದ ಅರ್ಜಿ ಆಹ್ವಾನಿಸಿದ್ದಾರೆ.
ಆಸಕ್ತಿಯುಳ್ಳ ಖಾಸಗಿ ಟಿವಿ ಚಾನಲ್‌ಗಳು ಸದರಿ ಇ–ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ದಿನಾಂಕ 06.02.2019 ರಂದು ಬುಧವಾರ ಮಧ್ಯಾಹ್ನ 1:00 ಗಂಟೆಯೊಳಗೆ ತಮ್ಮ ಅರ್ಜಿಗಳನ್ನು ಅಗತ್ಯ ದಾಖಲಾತಿಗಳು ಮತ್ತು ಡಿಮಾಂಡ್ ಡ್ರಾಫ್ಟ್ ಸಮೇತ ಸಲ್ಲಿಸಬೇಕೆಂದು ವಿನಂತಿಸಲಾಗಿದೆ.
ದಿನಾಂಕ 11–02–2019 ರಿಂದ ಇ–ಹರಾಜು ಕೈಗೊಳ್ಳಲಾಗುತ್ತದೆ.
38ನೇ ಇ–ಹರಾಜು ಪ್ರಕ್ರಿಯೆಯ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: http://doordarshan.gov.in ಮತ್ತು http://prasarbharati.gov.in.